**ಮುಂದುವರೆದ ಪಾಟೀ ಸವಾಲು ಃ ವಾದಿಯ ಪರ ವಕೀಲರಾದ**
**ಶ್ರೀ ಕೆ ಟಿ ಎಸ್ ರವರಿಂದ ಃ-**
**ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.**
**ಡಿ.ಡಬ್ಲ್ಯೂ. 1. ದಿಃ 20-11-2018. ಓ ಎಸ್ ನಂ ಃ 51/2007**

ಸರ್ವೆ ನಂ. 41/5 ರಲ್ಲಿ 1 ಎಕರೆ 22 ಗುಂಟೆ ಜಮೀನು ಅಬ್ಬತ್ತನಹಳ್ಳಿ ರಂಗಯ್ಯರವರ ಹೆಸರಿಗೆ ಇತ್ತು ಎಂದರೆ ಸರಿ. ನಿಪಿ 14 ರಂತೆ ದಾವಾ ಆಸ್ತಿಯು ಅಬ್ಬತ್ತನಹಳ್ಳಿ ನಾಯಕರ ರಂಗಯ್ಯನ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ನಿ ಪಿ 17 ಸದರಿ ಅಬ್ಬತ್ತನಹಳ್ಳಿ ನಾಯಕರ ರಂಗಯ್ಯನ ಹೆಸರಿನಲ್ಲಿದೆ ಎಂದರೆ ಸರಿ. ನಿಪಿ 22ನ್ನು ನಾನು 1 ರಿಂದ 4ನೇ ಪ್ರತಿವಾದಿಗಳಿಂದ ಖರೀದಿ ಮಾಡಿದ ಆಸ್ತಿಗೆ ಸಂಬಂಧಿಸಿದ ಖರೀದಿ ಪತ್ರವಾಗಿರುತ್ತದೆ. ದಾವಾ ಆಸ್ತಿಯನ್ನು ಮತ್ತು ಸರ್ವೆ ನಂ. 40/1, 1 ಎಕರೆ 2 ಗುಂಟೆ ಜಮೀನಗಳು ಅಬ್ಬತ್ತನಹಳ್ಳಿ ನಾಯಕರ ರಂಗಯ್ಯನಿಗೆ ಸೇರಿದ್ದು, ಸದರಿ 2 ಆಸ್ತಿಗಳನ್ನು ನಾಯಕರ ರಂಗಯ್ಯನಿಂದ ಖರೀದಿ ಮಾಡಿರುತ್ತೇನೆಂದರೆ ಸರಿ. ಸದರಿ ಆಸ್ತಿಗಳು ಒಂದಕ್ಕೊಂದು ಲಗತ್ತಾಗಿಲ್ಲ ಎಂದರೆ ಸರಿಯಲ್ಲ. ಸದರಿ ಆಸ್ತಿಗಳು ಒಂದಕ್ಕೊಂದು ಲಗತ್ತಾಗಿಲ್ಲದೇ ಇದ್ದರೂ ಸಹಾ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಸದರಿ 2 ಆಸ್ತಿಗಳು ನಿ ಪಿ 22 ರಂತೆ ನನ್ನ ಹೆಸರಿಗೆ ಖಾತೆ-ಪಹಣಿಯಾಗಿವೆ ಎಂದರೆ ಸರಿ. ಎಂ ಆರ್ ನಂ. 10/1982-1983 ರ ಆದೇಶದ ವಿರುದ್ಧ ವಾದಿಗಳು ಉಪವಿಭಾಗಾಧಿಕಾರಿಗಳ ಮುಂದೆ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಮೇಲ್ಮನವಿ ವಜಾಗೊಂಡಿದೆ ಎಂದು ನುಡಿಯುತ್ತಾರೆ. ಸದರಿ ಮೇಲ್ಮನವಿಯಲ್ಲಿ ತಡೆಯಾಜ್ಞೆ ಕೊಟ್ಟಿದ್ದರು ಎಂದರೆ ಸರಿ. ಸದರಿ ತಡೆಯಾಜ್ಞೆಯು ನಿ ಪಿ 25 ಮತ್ತು 26 ರಲ್ಲಿ ನಮೂದಗಿದೆಯೆಂದರೆ ಸರಿ. 2ನೇ ವಾದಿಯ ಗಂಡನು

ದಿಃ 25-07-2006 ರಂದು ಮರಣ ಹೊಂದಿರುತ್ತಾರೆಂದರೆ ಸರಿಯಲ್ಲ. ನಿ ಡಿ 28 ಸದರಿ 2ನೇ ವಾದಿಯ ಗಂಡನ ಮರಣ ಪ್ರಮಾಣ ಪತ್ರ ಎಂದರೆ ನನಗೆ ಗೊತ್ತಿಲ್ಲ. ದಿಃ 14-08-2013 ರಲ್ಲಾದ ಉಪವಿಭಾಗಾಧಿಕಾರಿಗಳ ಆದೇಶದ ಆಧಾರದ ಮೇಲೆ ತಾಲ್ಲೂಕು ಕಚೇರಿಯಲ್ಲಿ ದಿಃ 18-11-2015 ರಂದು ದಾವಾ ಆಸ್ತಿಯ ಆರ್ ಟಿ ಸಿ ಕಲಂ 11 ರಲ್ಲಿನ ನಿರ್ಭಂಧಕಾಜ್ಞೆಯನ್ನು ತೆಗೆದು ಹಾಕಲು ನಿ ಪಿ 29 ರಂತೆ ಅರ್ಜಿ ಕೊಟ್ಟು ಅದನ್ನು ತೆಗೆಸಿದ್ದೆವು ಎಂದರೆ ಸರಿ. ದಿಃ 19-11-2015 ರಂದು ನಾನು ದಾವಾ ಆಸ್ತಿಗೆ ಸಂಬಂಧಿಸಿದಂತೆ 6ನೇ ಪ್ರತಿವಾದಿ ಮತ್ತು ನಾಗಭೂಷಣ್ ಎನ್ನುವವರಿಗೆ ಜಿಪಿಎ ಬರೆದುಕೊಟ್ಟಿರುತ್ತೇನೆಂದರೆ ಸರಿ. ನಿ ಪಿ 29 ರ ಮೇಲೆ ಆದೇಶ ಬಾಕಿ ಉಳಿದಿರುವಾಗಲೇ ಸದರಿ ಜಿಪಿಎ ನ್ನು ನಾನು ಮಾಡಿಕೊಟ್ಟಿರುತ್ತೇನೆಂದರೆ ಸರಿ. ನಾನು ಲಿಂಗಾಯತ ಜಾತಿಗೆ ಸೇರಿದವರು. ಎಸ್.ನಂಜುಂಡಯ್ಯ ಮತ್ತು ಎಸ್. ನಾಗಭೂಷಣ್ ಕುರುಬರ ಜಾತಿಗೆ ಸೇರಿದವರು. ಸದರಿ ಜಿಪಿಎ ನಮ್ಮ ಕುಟುಂಬದವರ ಮದ್ಯೆ ಆಗಿಲ್ಲ ಎಂದರೆ ಸರಿ. ಸದರಿ ಜಿಪಿಎ ನ್ನು ನಾನು ರದ್ದುಪಡಿಸಿಲ್ಲ. ಸದರಿ ಜಿಪಿಎ ನ್ನು ರದ್ದುಪಡಿಸದ ಹೊರತಾಗಿ ದಾವಾ ಆಸ್ತಿಗೆ ಸಂಬಂಧಿಸಿದಂತೆ ಸಾಕ್ಷ್ಯ ನುಡಿಯಲು ನನಗೆ ಅಧಿಕಾರ ಇಲ್ಲ ಎಂದರೆ ಸರಿಯಲ್ಲ.

ದಿಃ 08-04-1982 ರ ಕ್ರಯಪತ್ರವನ್ನು ನಾನು ಕೆ ಎಸ್ ಎಫ್ ಸಿ ಯಲ್ಲಿ ಸಾಲ ಪಡೆಯಲು ಅಡಮಾನ ಮಾಡಿದ್ದರೂ ಸಹಾ ಕಳೆದು ಹೋಗಿದೆ ಎಂದು ಸುಳ್ಳು ಹೇಳಿದ್ದೇನೆಂದರೆ ಸರಿಯಲ್ಲ. ನಾನು ಖರೀದಿ ಮಾಡಿದ ಸದರಿ 2 ಆಸ್ತಿಗಳನ್ನು ನಾನು ಯಾರ್‍ಯಾರಿಗೆ ಎಷ್ಟೆಷ್ಟು ಹಣಕ್ಕೆ ಯಾವಾಗ ಮಾರಾಟ ಮಾಡಿದ್ದೇನೆಂದು ನನಗೆ ನೆನಪಿಲ್ಲ. ದಾವಾ ಆಸ್ತಿಯನ್ನು ಮಾರಾಟ ಮಾಡಲು ನನಗೆ ಯಾವುದೇ ಅಧಿಕಾರ

ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ದಿಃ 10-03-2016 ರಂದು ದಾವಾ ಆಸ್ತಿಗೆ ಸಂಬಂಧಿಸಿದಂತೆ ಸುಳ್ಳು ಕ್ರಯಪತ್ರವನ್ನು ಸೃಷ್ಟಿ ಮಾಡಿದ್ದೇವೆಂದರೆ ಸರಿಯಲ್ಲ. ಸದರಿ ಕ್ರಯಪತ್ರವು ಕಾನೂನಿನ ಅಡಿಯಲ್ಲಿ ಊರ್ಜಿತ ಅಲ್ಲ ಎಂದರೆ ಸರಿಯಲ್ಲ. ಪ್ರಸ್ತುತ ದಾವೆಯಲ್ಲಿರುವ 6ನೇ ಪ್ರತಿವಾದಿಯ ವಿರುದ್ಧ ನೀಡಿರುವ ತಾತ್ಕಾಲಿಕ ನಿರ್ಭಂದಕಾಜ್ಞೆಯ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ತಾತ್ಕಾಲಿಕ ನಿರ್ಭಂದಕಾಜ್ಞೆಯು ಆರ್ ಟಿ ಸಿ ಕಾಲಂ ನಲ್ಲಿ ನಮೂದಾಗಿರುವ ವಿಚಾರ ನನಗೆ ಗೊತ್ತು. 6ನೇ ಪ್ರತಿವಾದಿಯ ಪರ ಆದೇಶವಾಗಿರುವ ಎಂ ಆರ್ ಆದೇಶದ ವಿರುದ್ಧವಾಗಿ ವಾದಿಗಳು ಉಪವಿಭಾಗಾಧಿಕಾರಿಗಳ ಮೇಲ್ಮನವಿ ಸಲ್ಲಿಸಿರುತ್ತಾರೆಂದರೆ ಸರಿ. ಸದರಿ ಅಪೀಲ್‌ನಲ್ಲಿ ತಡೆಯಾಜ್ಞೆ ಕೊಟ್ಟಿರುತ್ತಾರೆಂದರೆ ಸರಿಯಲ್ಲ. ಸದರಿ ಅಪೀಲ್ ಆದೇಶದ ವಿರುದ್ಧ ವಾದಿಗಳು ಜಿಲ್ಲಾಧಿಕಾರಿಗಳ ಮುಂದೆ ರಿವಿಜನ್ ಪಿಟಿಷನ್ ನಡೆಸಿರುತ್ತಾರೆಂದರೆ ಸರಿ. ದಿಃ 08-04-1982 ರ ನಮ್ಮ ಹೆಸರಿನ ಕ್ರಯಪತ್ರವನ್ನು ದಾವಾ ಆಸ್ತಿಯನ್ನು ಅಬ್ಬತ್ತನಹಳ್ಳಿ ನಾಯಕರ ರಂಗಯ್ಯನ ವಂಶಸ್ಥರಲ್ಲದ ಓಲೇಕಾರ್ ರಂಗಯ್ಯನ ಕುಟುಂಬಕ್ಕೆ ಸೇರಿದ 1 ಮತ್ತು 2ನೇ ಪ್ರತಿವಾದಿಗಳಿಂದ ಪಡೆದುಕೊಂಡಿರುತ್ತೇನೆಂದರೆ, ಸಾಕ್ಷಿಯು ತಾನು ಅಬ್ಬತ್ತನಹಳ್ಳಿ ನಾಯಕರ ರಂಗಯ್ಯನ ಮಕ್ಕಳಾದ ರಾಮಯ್ಯ ಮತ್ತು ಲಕ್ಷ್ಮಣರವರಿಂದ ಖರೀದಿ ಮಾಡಿರುವುದಾಗಿ ನುಡಿಯುತ್ತಾರೆ.

ದಾವಾ ಸ್ವತ್ತಿನ ಮೂಲ ಮಾಲೀಕರಾದ ಅಬ್ಬತ್ತನಹಳ್ಳಿ ನಾಯಕರ ರಂಗಯ್ಯನವರಿಂದಾಗಲೀ ಅಥವಾ ಇವರ ಕಾನೂನು ಬದ್ಧ ವಾರಸುದಾರರಾದ ಬಾಗೂರಯ್ಯ ಅಥವಾಅ ವರ ಮೊಮ್ಮಕ್ಕಳಾದ ರಂಗಯ್ಯ ಉರುಫ್ ಬ್ಯಾಟಪ್ಪ, ಕೋಡಪ್ಪ ಮತ್ತು ಹನುಮಂತಯ್ಯ ಹಾಗೂ ಇತರೇ ವಾದಿಗಳಿಂದ ಯಾವುದೇ ಒಪ್ಪಿಗೆ

ಪತ್ರವಾಗಲೀ, ಕ್ರಯ, ಭೋಗ್ಯ, ಆಧಾರ ವರ್ಗಾವರ್ಗಿ ಆಗಿಲ್ಲ ಎಂದರೆ ಸಾಕ್ಷಿಯು ಅವರ್‍ಯಾರೆಂದು ತನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ದಾವಾ ಆಸ್ತಿಯು ವಾದಗಳನ್ನು ಹೊರತುಪಡಿಸಿ  ಬೇರೆ ಯಾರಿಗೂ ಸಂಬಂಧವಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ- ಇಲ್ಲ.**

**(ತೆ ನ್ಯಾ ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ ಹೇಳಿ ಕೇಳಿ ಸರಿ ಇದೆ.**

**ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆಎಂಎಫ್‌ಸಿ,, ಗುಬ್ಬಿ**